ಓ.ಎಸ್. ನಂಃ **61/2023**
ಪಿ.ಡಬ್ಲ್ಯೂಃ **1**

ದಿನಾಂಕ **07-03-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ: ಶ್ರೀ. ಎಂ ವಿ ಕೆ ವಕೀಲರಿಂದಃ

ದಾವಾ ಜಮೀನು ನನಗೆ ನನ್ನ ಹಿರಿಯರಿಂದ ಬಂದಿರುತ್ತದೆ. ನನ್ನ ಹಿರಿಯರಿಂದ ನನಗೆ 11 ಗುಂಟೆ ಜಮೀನು ಬಂದಿರುತ್ತದೆ. ನನ್ನ ಮಗನಿಗೂ ಸಹ 11 ಗುಂಟೆ ಬಂದಿರುತ್ತದೆ. ಅನಂತರೆಡ್ಡಿ ತಂದೆ ಶಂಕ್ರಣ್ಣ ಎಂಬುವವರು ನನ್ನ ಅಣ್ಣ-ತಮ್ಮಂದಿರ ಪೈಕಿ ಆಗಿರುತ್ತಾರೆ. ಸರ್ವೆ ನಂ.113 ರಲ್ಲಿ ನಮಗೆ ಸೇರಿದ 22 ಗುಂಟೆ ಹಾಗೂ ಅನಂತರೆಡ್ಡಿ ರವರಿಗೆ ಸೇರಿದ ಸುಮಾರು 22-23 ಗುಂಟೆ ಜಮೀನು ಇದೆ. ಸದರಿ ಜಮೀನು ಗ್ರಾಮಕ್ಕೆ ಹೊಂದಿಕೊಂಡಿದೆ ಎಂದರೆ ಸರಿ. ದಾವಾ ಜಮೀನು ಸಾಗುವಳಿ ಭೂಮಿ ಆಗಿರುವುದಿಲ್ಲ. ಈಗ 10 ವರ್ಷಗಳಿಂದ ಸಾಗುವಳಿ ಮಾಡಿಲ್ಲ. ಸರ್ವೆ ನಂ.113 ರಲ್ಲಿನ ಒಟ್ಟು ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ.

2. ಅನಂತರೆಡ್ಡಿರವರ ಜಮೀನಿನ ಪೂರ್ವಕ್ಕೆ ಕುರುಬರ ಜಮೀನು ಇದೆ, ಆದರೆ ನನಗೆ ಸದರಿ ಜಮೀನಿನ ಮಾಲಿಕರ ಹೆಸರು ನಿಖರವಾಗಿ ಗೊತ್ತಿಲ್ಲ. ಪಶ್ಚಿಮಕ್ಕೆ ರಸ್ತೆ ಇದೆ. ಉತ್ತರಕ್ಕೆ ನಮ್ಮ ಆಸ್ತಿ ಇದೆ. ದಕ್ಷಿಣಕ್ಕೆ ಬೇರೆಯವರ ಆಸ್ತಿ ಇದೆ, ಸದರಿ ಆಸ್ತಿ ಮಾಲಿಕರ ಹೆಸರು ನನಗೆ ಗೊತ್ತಿಲ್ಲ. ನನ್ನ ಹೆಸರಿನಲ್ಲಿ ಇರುವ ದಾವಾ 11 ಗುಂಟೆ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ನನ್ನ ಮಗ ಸಹ ಒಂದು ದಾವೆ ದಾಖಲಿಸಿದ್ದಾನೆ ಎಂದರೆ ಸರಿ. ನನ್ನ ಮಗ ದಾಖಲಿಸಿದ ದಾವೆಯ ಜಮೀನಿನ ಚಕ್ ಬಂದಿಯೂ ಸಹ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ